ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ಯಾವ ಯಾವ ಭಾಗದಲ್ಲಿ ವನಮಹೋತ್ಸವ ಆಚರಿಸಲಾಗುತ್ತಿದೆ.

ಆ) ಯಾವ ಯಾವ ಜಾತಿ ಸಸಿಗಳನ್ನು ನೆಡುವ ಕಾರ್ಯಕ್ರಮ ಹಾಕಿಕೊಂಡಿರುವರು. ಎಷ್ಟು ಸಸಿಗಳನ್ನು ನೆಡಲಾಗಿದೆ. ಇದಕ್ಕಾಗಿ ಸಾಮಾಜಿಕ ಅರಣ್ಯ ಇಲಾಖೆಯವರು ಗ್ರೀನ್ ಬೆಲ್ಟ್ ಯೋಜನೆಯಡಿಯಲ್ಲಿ ಮಾಡಿದ ಖರ್ಚು ಎಷ್ಟು?

ಶ್ರೀ ಹೆಚ್.ವೈ.ಮೇಟಿ (ಅರಣ್ಯ ಸಚಿವರು):-

ಅ) ಹುಬ್ಬಳ್ಳಿ ನಗರದ ಬಡಾವಣೆಗಳಾದ ವಿದ್ಯಾನಗರ, ನವನಗರ, ಕೇಶ್ವಾಪುರ, ಸಿದ್ಧಾರೂಢ ಮಠ, ಶಿರಗುಪ್ಪ ಗ್ಲಾಸ್ ಹೌಸ್ ಹಾಗೂ ಸೂಲ್ಜಿ ಶಾಲೆ ವರೂರ ಶಾಲೆ ಮತ್ತು ಆಬಕಾರಿ ಕಛೇರಿ ನವನಗರ ಈ ಸ್ಥಳಗಳಲ್ಲಿ ವನಮಹೋತ್ಸವ ಆಚರಿಸಲಾಗಿದೆ.

ಆ) ಸಂಪಿಗೆ ಗುಲ್‌ಮೋಹರ, ರೆಸಟ್ರಿ, ವೆಲ್ವಾಫಾರ್ಮ ಸಿಸ್ಸೂ, ಜಕ್ರಂಡಾ, ಮಹಾಗನಿ ಹೊಳೆ ದಾಸವಾಳ, ಬೇವು, ಕಾಡು ಬಾದಾಮಿ, ಸೈಪ್ರೋಡಿಯಾ, ನೇರಳೆ ಪೈಕನ್ ಮುಂತಾದ ಜಾತಿಯ ಸಸಿಗಳನ್ನು ನೆಡಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ವನಮಹೋತ್ಸವ ಕಾರ್ಯಕ್ರಮದಡಿಯಲ್ಲಿ ನೆಟ್ಟ ಸಸಿಗಳ ಸಂಖ್ಯೆ ಹಾಗೂ ಅದಕ್ಕೆ ತಗುಲಿದ ಖರ್ಚಿನ ವಿವರ ಈ ಕೆಳಗಿನಂತಿದೆ.

ವರ್ಷ	ವನಮಹೋತ್ಸವದಲ್ಲಿ ನೆಟ್ಟ ಸಸಿಗಳ ಸಂಖ್ಯೆ	ವನಮಹೋತ್ಸವಕ್ಕಾಗಿ ಮಾಡಿದ ವೆಚ್ಚ (ರೂ.ಗಳು)
1993-94	110	2000.00
1994-95	65	3540.00
1995-96	185	4500.00

ವಿಷಯ:- ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳು ಯಶಸ್ವಿಯಾಗಲು ಕೈಗೊಂಡ ಕ್ರಮ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1688 (2464)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳು ಯಶಸ್ವಿಯಾಗಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಇದುವರೆಗೆ ಕುಟುಂಬ ಕಲ್ಯಾಣಕ್ಕೆ ಒಳಪಟ್ಟವರ ಒಟ್ಟು ಸಂಖ್ಯೆ ಎಷ್ಟು?

ಇ) ರಾಜ್ಯದಲ್ಲಿರುವ ಮಕ್ಕಳು ಮತ್ತು ಮಹಿಳೆಯರ ಆಸ್ಪತ್ರೆಗಳೆಷ್ಟು?

ಈ) ಆಸ್ಪತ್ರೆಗಳಲ್ಲಿ ಕೊರತೆ ಇರುವ ವೈದ್ಯ ಸಂಖ್ಯೆ ಎಷ್ಟು ?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮ ಯಶಸ್ವಿಯಾಗಲು ಸರ್ಕಾರ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ:-

1. ತಾಯಿ ಮಕ್ಕಳ ಆರೋಗ್ಯದ ಆರೈಕೆ.

2. ಗರ್ಭಿಣಿ ಸ್ತ್ರೀಯರಿಗೆ ಟಿಟನಸ್ ವಿರುದ್ಧ ಹಾಗೂ ಮಕ್ಕಳಿಗೆ ಇಂಜಕ್ಷನ್ ಬಿಸಿಜಿ ಪೋಲಿಯೋ ಔಷಧ ಇಂಜಕ್ಷನ್ ಡಿಪಿಟಿ ಹಾಗೂ ದಡಾರ ವಿರುದ್ಧ ಇಂಜಕ್ಷನ್ ನೀಡುವುದು.

3. ಪೌಷ್ಠಿಕತೆಯ ಪೂರಕವಾಗಿ ಗರ್ಭಿಣಿ ಸ್ತ್ರೀಯರಿಗೆ ಹಾಗೂ ಮಕ್ಕಳಿಗೆ ಕಬ್ಬಿಣಾಂಶದ ಮಾತ್ರೆ ಹಾಗೂ ಮಕ್ಕಳಿಗೆ ವಿಟಮಿನ್ ಎ ನೀಡುವಿಕೆ.

4. ಗರ್ಭ ನಿರೋಧಕ ತಾತ್ಕಾಲಿಕ ಹಾಗೂ ಶಾಶ್ವತ ವಿಧಾನಗಳ ಸೇವೆ ಒದಗಿಸುವುದು.

5. ಆರೋಗ್ಯ ಶಿಕ್ಷಣ ಮಾಹಿತಿ ಹಾಗೂ ಸಂಪರ್ಕದಿಂದ ಜನಸಾಮಾನ್ಯರು ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಅನುಸರಿಸುವಂತೆ ಮನ ಒಲಿಸುವುದು.

ಆ) ಇದುವರೆಗೆ ಕುಟುಂಬ ಕಲ್ಯಾಣಕ್ಕೆ ಒಳಪಟ್ಟವರ ಸಂಖ್ಯೆ 42.20 ಲಕ್ಷ ದಂಪತಿಗಳು.

ಇ) ಮೈಸೂರು ಜಿಲುವಾಂಬ ಆಸ್ಪತ್ರೆ ಮತ್ತು ಬೆಂಗಳೂರು ವಾಣಿವಿಲಾಸ ಆಸ್ಪತ್ರೆಗಳಲ್ಲದೆ ರಾಜ್ಯದಲ್ಲಿ ಮಕ್ಕಳು ಮತ್ತು ಮಹಿಳೆಯರಿಗಾಗಿ ಒಟ್ಟು 223 ಪ್ರಸೂತಿ ಗೃಹಗಳಿರುತ್ತವೆ.

ಈ) ಈಗ 561 ವೈದ್ಯರ ಹುದ್ದೆಗಳು ಖಾಲಿ ಇವೆ.

ವಿಷಯ:- ಶಿಗ್ಗಾಂವ ಆಸ್ಪತ್ರೆ ಮೇಲ್ದರ್ಜೆಗೆ ಏರಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1691 (2272)

ಶ್ರೀ ಮಂಜುನಾಥ್ ಸಿ.ಕುನ್ನೂರ (ಶಿಗ್ಗಾಂವ್):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1995-96ನೇ ಸಾಲಿನಲ್ಲಿ ಎಷ್ಟು ಸಮುದಾಯ ಆರೋಗ್ಯ ಕೇಂದ್ರಗಳನ್ನು 70 ಅಥವಾ 100 ಹಾಸಿಗೆಗಳ ಜನರಲ್ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದು.

ಆ) ಶಿಗ್ಗಾಂವ್ ಸಿ.ಹೆಚ್.ಸಿ.ಯನ್ನು 100 ಹಾಸಿಗೆಗಳಿಗೆ ಮೇಲ್ದರ್ಜೆಗೆ ಏರಿಸಲು ಸರ್ಕಾರಕ್ಕೆ ಸಾರ್ವಜನಿಕರಿಂದ ಮನವಿ ಮಾಡಲಾಗಿದೆಯೇ?

ಇ) ಹಾಗಿದ್ದಲ್ಲಿ ಶಿಗ್ಗಾಂವ್ ಆಸ್ಪತ್ರೆ ಕೂಡಲೇ ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಈ ವಿಷಯವನ್ನು ಪರಿಶೀಲಿಸಲಾಗುವುದು.

ಆ) ಹೌದು.

ಇ) ಸಮುದಾಯ ಆರೋಗ್ಯ ಕೇಂದ್ರ ಶಿಗ್ಗಾಂವ್ ಈ ಆಸ್ಪತ್ರೆಯನ್ನು 30 ಹಾಸಿಗೆಯಿಂದ 50 ಹಾಸಿಗೆಗೆ ಮೇಲ್ದರ್ಜೆಗೇರಿಸಲು ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿಯಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ವಿಷಯ:- ದೇವನಹಳ್ಳಿ ಕ್ಷೇತ್ರದಲ್ಲಿ ಪ್ರಾಥಮಿಕ ಶಿಕ್ಷಕರ ಕೊರತೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1693 (2231)